# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,

## ಸಹಾಯಕ ಕಾರ್ಯಪಾಲಕ ಅಭಿಯಂತರರು, ಯಲಹಂಕ ಉಪ ವಿಭಾಗ

## ಕೆಂಪೇಗೌಡ ವಾರ್ಡ್ ನಂ-01ರಲ್ಲಿ

## ದಿನಾಂಕ: 15-10-2022 ರಂದು ನಡೆದ ವಾರ್ಡ್ ಸಮಿತಿ ಸಭಾ ನಡವಳಿ.

ದಿನಾಂಕ: 15-10-2022 ರಂದು ಬೆಳಗ್ಗೆ 11.00 ಗಂಟೆಗೆ ಬಿ.ಬಿ.ಎಂ.ಪಿ ಯಲಹಂಕ ವಿಭಾಗದ ಕಛೇರಿಯಲ್ಲಿ ವಾರ್ಡ್ ನಂ-01ರ ವಾರ್ಡ್ ಸಮಿತಿಯ ಮಾನ್ಯ ನೋಡೆಲ್ ಅಧಿಕಾರಿಗಳು ಹಾಗೂ ಕಾರ್ಯದರ್ಶಿಗಳು ಜೊತೆ ನೆಡೆದ ವಾರ್ಡ್ ಕಮಟಿ ಸಭೆಯ ನಡವಳಿಗಳು.

| ಕ್ರ.ಸಂ | ಸಭೆಯಲ್ಲಿ ಭಾಗವಹಿಸಿದ ಅಧಿಕಾರಿ ಹೆಸರು | ಪದನಾಮ |
|---|---|---|
| 01 | ಶ್ರೀ.ರಾಮಸಂಜೀವಯ್ಯ | ಸಹಾಯಕ ಕಾರ್ಯಪಾಲಕ ಅಭಿಯಂತರರು ಯಲಹಂಕ ಉಪ ವಿಭಾಗ ಹಾಗೂ ಬಿ.ಬಿ.ಎಂ.ಪಿ ನೋಡಲ್ ಅಧಿಕಾರಿಗಳು (ವಾರ್ಡ್ ನಂ-01) |
| 02 | ಶ್ರೀ.ದೇವರಾಜಯ್ಯ.ಕೆ.ಬಿ. | ಸಹಾಯಕ ಅಭಿಯಂತರರು (ವಾರ್ಡ್ ನಂ-01) |
| 03 | ಶ್ರೀ.ಕೆ.ಎಸ್. ಬಾಬುರೆಡ್ಡಿ | ಸಹಾಯಕ ಅಭಿಯಂತರರು (ವಿದ್ಯುತ್) ಗೈರು ಹಾಜರಾಗಿರುತ್ತಾರೆ. |
| 04 | ಶ್ರೀ.ಅಶೋಕ್ .ಎಂ.ಆರ್ | ಸಹಾಯಕ ಕಂದಾಯ ಅಧಿಕಾರಿಗಳು ಯಲಹಂಕ ಉಪ ವಿಭಾಗ ಗೈರು ಹಾಜರಾಗಿರುತ್ತಾರೆ. |
| 05 | ಶ್ರೀ.ಶಿವಕುಮಾರ್.ಎ.ವಿ | ರೆವಿನ್ಯೂ ಇನ್ಸ್‌ಪೇಕ್ಟರ್ ಗೈರು ಹಾಜರಾಗಿರುತ್ತಾರೆ. |
| 06 | ಶ್ರೀಮತಿ. ಸುನಂದಮ್ಮ | ಹಿರಿಯ ಆರೋಗ್ಯ ಪರಿವೀಕ್ಷಕರು |
| 07 | ಶ್ರೀ. ವಿನಯ ಕುಮಾರ್ | ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) |
| 08 | ಶ್ರೀ. ಎನ್. ಶ್ರೀರಾಮ ರೆಡ್ಡಿ | ರೆವಿನ್ಯೂ ಇನ್ಸ್‌ಪೇಕ್ಟರ್ ಗೈರು ಹಾಜರಾಗಿರುತ್ತಾರೆ. |
| 09 | ಶ್ರೀ.ವಿವೇಕ್ | ಕಿರಿಯ ಆರೋಗ್ಯಪರಿವೀಕ್ಷಕರು ವಾಡ್-1 |
| 10 | ಶ್ರೀ.ಕುಮಾರ್ ಸ್ವಾಮಿ | ಜಾನುವಾರ ಅಧಿಕಾರಿಗಳು |
| 11 | ಶ್ರೀ.ನವೀನ್ ಕುಮಾರ್ ವಿ | ಸಹಾಯಕ ಅಭಿಯಂತರರು (ವಿದ್ಯುತ್) ಬಿ.ಬಿ.ಎಂ.ಪಿ |
| | ಬಡಾವಣೆ ಕ್ಷೇಮಾಭಿವೃದಿ ಸಂಘದ ಅಧ್ಯಕ್ಷರು/ಕಾರ್ಯದರ್ಶಿ/ಸದಸ್ಯರು/ಸಾರ್ವಜನಿಕರು | |
| 01 | ಶ್ರೀ.ಹೇಮರಾಜ್ | ಸ್ಥಳೀಯ ಮುಖಂಡರು |
| 02 | ಶ್ರೀ. ಅ.ಬ.ಶಿವಕುಮಾರ್ | ಸ್ಥಳೀಯ ಮುಖಂಡರು |

| | | |
|---|---|---|
| 03 | ಶ್ರೀ.ರಾಮರೆಡ್ಡಿ | ಸ್ಥಳೀಯ ನಿವಾಸಿಗಳು |
| 04 | ಶ್ರೀ.ಎ.ಎಸ್.ರಾಜು | ಸ್ಥಳೀಯ ನಿವಾಸಿಗಳು |
| 05 | ಶ್ರೀ.ಶ್ರೀನಿವಾಸಲು | ಸ್ಥಳೀಯ ನಿವಾಸಿಗಳು |
| 06 | ಶ್ರೀ.ವೆಂಕಟೇಶ್ | ಮಾರುತಿನಗರ |
| 07 | ಶ್ರೀ.ದಶರಥ | ಯಲಹಂಕ |
| 08 | ಶ್ರೀ.ಎ.ಎನ್.ಮದುಸೂದನ್ (ಮಂಜುನಾಥ) | ಎಲೆಕ್ಟ್ರೀಕಲ್ಸ್ ಗುತ್ತಿಗೆದಾರರು |
| 09 | ಶ್ರೀ.ಆಕಾಶ್ | ಮಾರ್ಷಲ್ |

ಸಭೆಗೆ ಹಾಜರಿದ್ದ ನೋಡೆಲ್ ಅಧಿಕಾರಿಗಳು ಹಾಗೂ ಬಾಗವಹಿಸಿದ್ದ ಎಲ್ಲಾ ಅಧಿಕಾರಿಗಳನ್ನು ಮತ್ತು ಸಾರ್ವಜನಿಕರ ಸಭೆಗೆ ಸ್ವಾಗತಿಸುತ್ತಾ ಸಭೆ ಪ್ರಾರಂಭಿಸಲು ನೋಡೆಲ್ ಅಧಿಕಾರಿರವರನ್ನು ಕೋರಲಾಯಿತು.

ಶ್ರೀ.ರಾಮಸಂಜೀವಯ್ಯ ಸಹಾಯಕ ಕಾರ್ಯಪಾಲಕ ಅಭಿಯಂತರರು ಯಲಹಂಕ ಉಪ ವಿಭಾಗ ಹಾಗೂ ಸಮಿತಿಯ ನೋಡೆಲ್ ಅಧಿಕಾರಿಯವರು ಸಭೆಯನ್ನು ಪ್ರಾರಂಭಿಸಿ ಈ ಹಿಂದಿನ ಸಭೆಯಲ್ಲಿ ಅಂದರೆ ದಿನಾಂಕ: 01-10-2022 ರಂದು ನಡೆದ ಸಭೆಯಲ್ಲಿ ಕೈಗೊಂಡ ಕ್ರಮಗಳ ಬಗ್ಗೆ ವಿವರಣೆ ಕೇಳಿದರು. ಹಾಗೂ ವಾರ್ಡ್ ನಂ-01ರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಅಧಿಕಾರಿಗಳಿಗೆ ಕೈಗೊಂಡ ಕ್ರಮದ ಬಗ್ಗೆ ವರದಿ ನೀಡುವಂತೆ ಸಭೆಯಲ್ಲಿ ಸೂಚಿಸಿದರು. ಹಾಗೂ ಈ ಹಿಂದೆ ಕೈಗೊಂಡಿರುವ ಸಭೆಯ ನಡವಳಿಗಳನ್ನು ಸಭೆಯಲ್ಲಿ ವರದಿಯನ್ನು ಒದಲಾಯಿತು.

| ಕ್ರ.ಸಂ | ವಿಷಯ ಸೂಚಿ | ನಿರ್ಣಯ | ಕ್ರಮ ತೆಗೆದುಕೊಳ್ಳಬೇಕಾದ ಅಧಿಕಾರಿ |
|---|---|---|---|
| 01 | ಕೆಂಪೇಗೌಡ ವಾರ್ಡ್ ನಂ-01ರ ವ್ಯಾಪ್ತಿಯಲ್ಲಿರುವ ಆರ್.ಆರ್.ಗೋಲ್ಡ್ ಪ್ಯಾಲೆಸ್ ಮುಂಬಾಗ ಮತ್ತು ಪೋಸ್ಟ್ ಆಫೀಸ್ ಮುಂಭಾಗ ಬಿ.ಎಂ.ಟಿ.ಸಿ ಬಸ್‌ಗಳು ಸುಮಾರು ಅರ್ದ ಗಂಟೆಗಳ ಕಾಲ ನಿಲ್ಲಿಸುತ್ತಿರುವುದರಿಂದ ಸಾರ್ವಜನಿಕರ ಒಡಾಟಕ್ಕೆ ಮತ್ತು ವಾಹನ ಸಂಚಾರಕ್ಕೆ ತುಂಬಾ ತೊಂದರೆ ಉಂಟಾಗುತ್ತಿರುವ ಬಗ್ಗೆ ಈ ಹಿಂದೆ ಹಲವಾರು ಭಾರಿ ದೂರುಗಳನ್ನು ಸಲ್ಲಿಸಿದ್ದರೂ ಸಹ ಕ್ರಮ ಕೈಗೊಂಡಿರುವುದಿಲ್ಲ ಮತ್ತು ಬಿ.ಎಂ.ಟಿ.ಸಿ ಅಧಿಕಾರಿಗಳು ಸಭೆಗೆ ಹಾಜರಾಗಿರುವುದಿಲ್ಲ ವೆಂದು ಸಲ್ಲಿಸಿದ್ದ ದೂರಿನ ಬಗ್ಗೆ ಮತ್ತೊಮ್ಮೆ ಸಭೆಯಲ್ಲಿ ದೂರನ್ನು ಸಲ್ಲಿಸಿದರು. | ಇದಕ್ಕೆ ಸಂಬಂದಿಸಿದಂತೆ ಸಭೆಯಲ್ಲಿ ಹಾಜರಾಗಿದ್ದ ಶ್ರೀ. ರಮೇಶ್ ಡಿಪೋ 11 ಯಲಹಂಕದ ವ್ಯವಸ್ಥಾಪಕರು ಸಭೆಯಲ್ಲಿ ಮುಂದಿನ ಸಭೆಗೆ ವಿವರೊಂದಿಗೆ ವರದಿ ಸಲ್ಲಿಸುತ್ತೇನೆಂದು ಸಭೆಗೆ ತಿಳಿಸಿದರು. ಆದರೆ ದಿನಾಂಕ: 15-10-2022 ರಂದು ನಡೆದ ಸಭೆಗೆ ಹಾಜರಾಗಿರುವುದಿಲ್ಲ. | ಬಿ.ಎಂ.ಟಿ.ಸಿ ಡಿಪೋ ಮ್ಯಾನೇಜರ್ ರಮೇಶ್ |

| | | | |
|---|---|---|---|
| 02 | ಕೆಂಪೇಗೌಡ ವಾರ್ಡ್ ನಂ-01ರ ವ್ಯಾಪ್ತಿಯಲ್ಲಿರುವ ಗಾಂಧಿನಗರ ಕೆ.ಹೆಚ್.ಬಿ ಕಾಲೋನಿಯಲ್ಲಿ ಸರ್ವೆ ನಂ 108ಕ್ಕೆ ಸಂಬಂದಿಸಿದಂತೆ ಈ ಹಿಂದೆ ಸುಮಾರು 1985 ನೇ ಇಸವಿಯಲ್ಲಿ ಈ ಜಾಗವನ್ನು ಶ್ರೀ.ಗೋಪಾಲಪ್ಪ ನವರು ಮತ್ತು ಕೆಂಪಣ್ಣನವರು ಉಚಿತವಾಗಿ ಕರ್ನಾಟಕ ಗೃಹ ಮಂಡಳಿಯವರಿಗೆ 10 ಗುಂಟೆ ಜಾಗವನ್ನು ನೀಡಿರುತ್ತಾರೆ. ಹಾಗೂ ಕೆ.ಹೆಚ್.ಬಿ ಜಾಗದಲ್ಲಿ 2 ರಸ್ತೆಗಳನ್ನು ನಿರ್ಮಿಸಿ 2001 ರಲ್ಲಿ ನಗರ ಸಭೆಗೆ ಹಸ್ತಾಂತರ ಮಾಡಿರುತ್ತಾರೆ. ಈ ರಸ್ತೆಯಲ್ಲಿ ಎಲ್ಲಾ ರೀತಿಯ ಅಭಿವೃದ್ದಿ ಕಾಮಗಾರಿಗಳನ್ನು ಕೈಗೊಂಡು ನಿರ್ವಹಿಸಲಾಗಿರುತ್ತದೆ. (ಡಾಂಬರೀಕರಣ, ಚರಂಡಿ, ಸ್ಟೀಟ್ ಲೈಟ್, ಬಿಡಬ್ಲ್ಯೂ.ಎಸ್.ಎಸ್.ಬಿ ಒಳಚರಂಡಿ, ವ್ಯವಸ್ಥೆ ಕಾವೇರಿ ನೀರಿನ ವ್ಯವಸ್ತೆ) ಇತ್ಯಾದಿ ಎಲ್ಲಾ ಕಾಮಗಾರಿಗಳನ್ನು ನಿರ್ವಹಿಸಿ ಅಭಿವೃದ್ದಿಪಡಿಸಲಾಗಿರುತ್ತದೆ. ಹಾಗೂ ಈ ರಸ್ತೆಯನ್ನು ಸಾರ್ವಜನಿಕರ ಒಡಾಟಕ್ಕೆ ಉಪಯೋಗಿಸಲಾಗಿರುತ್ತದೆ. ಆದರೆ ಕೆಲವು ಅಪರಿಚಿತ ವ್ಯಕ್ತಿಗಳು ಇತ್ತೀಚೆಗೆ ಈ ಎರಡು ರಸ್ತೆಗಳಿಗೆ ಅಡ್ಡಲಾಗಿ ಹ್ಯೂಂ ಪೈಪ್‌ಗಳನ್ನು ಅಡ್ಡಲಾಗಿ ಹಾಕಿ ಅತಿಕ್ರಮ ಪ್ರವೇಶ ಮಾಡಿರುವುದಾಗಿ ತಿಳಿಸಿ ಕೂಡಲೇ ಇವರ ಮೇಲೆ ಕಾನೂನು ರೀತಿ ಕ್ರಮ ಕೈಗೊಳ್ಳಬೇಕೆಂದು ಹಾಗೂ ಮುಂದೆ ಈ ರೀತಿ ಸಾರ್ವಜನಿಕರಿಗೆ ತೊಂದರೆ ಉಂಟಾಗದಂತೆ ಕ್ರಮ ಕೈಗೊಳ್ಳಲು ಸ್ಥಳೀಯ ನಿವಾಸಿಗಳಾದ ಶ್ರೀ. ಅ.ಬ ಶಿವಕುಮಾರ್ ಮತ್ತು ಕೆ.ಹೆಚ್.ಬಿ ಕಾಲೋನಿ ನಿವಾಸಿಗಳು ಸಭೆಯಲ್ಲಿ ಅಕ್ಷೇಪಣೆ ವ್ಯಕ್ತಪಡಿಸಿದರು. | ಇದಕ್ಕೆ ಸಬಂದಿಸಿದಂತೆ ಸಭೆಯಲ್ಲಿ ಹಾಜರಿದ್ದ ಶ್ರೀ. ಮಹೇಂದ್ರ ಸಿಂಗ್ ಕರ್ನಾಟಕ ಗೃಹ ಮಂಡಳಿ ಅಧಿಕಾರಿಗಳು ಮಾತನಾಡಿ ಇದು ಸರ್ಕಾರದ ರಸ್ತೆಯಾಗಿರುವುದಾಗಿ ಹೇಳಿರುತ್ತಾರೆ ಈ ಜಾಗವನ್ನು ಈಗಾಗಲೇ ನಗರ ಸಭೆಗೆ ಹಸ್ತಾಂತರ ಮಾಡಿರುವುದಾಗಿ ತಿಳಿಸಿದ್ದು, ಹಾಗೂ ಅನುಮೋದಿತ ಬಢಾವಣೆ ನಕ್ಷೆ ಹಾಗೂ ಇತರೆ ದಾಖಲಾತಿಗಳನ್ನು ನೊಡೆಲ್ ಅಧಿಕಾರಿಗಳಿಗೆ ನೀಡಿದರು. | ಕರ್ನಾಟಕ ಗೃಹ ಮಂಡಳಿ |
| 03 | ಯಲಹಂಕ ಪೋಸ್ಟ್ ಆಪೀಸ್ ಪಕ್ಕದಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ಪೈಪ್‌ಲೈನ್ ಹೊಡೆದು ಹೊಗಿದ್ದು, ರಸ್ತೆಯಲ್ಲಿ ಹಳ್ಳ ಬಿದ್ದಿರುತ್ತದೆ. ಇದರಿಂದ ಸಾರ್ವಜನಿಕರಿಗೆ ಹಾಗೂ ವಾಹನ ಸಂಚಾರರಿಗೆ ರಸ್ತೆ ಅಪಘಾತಗಳು ಉಂಟಾಗುವ ಸಾದ್ಯತೆ ಹೆಚ್ಚಾಗಿರುವುದರಿಂದ ಸ್ಥಳ ಪರಿಶೀಲನೆ ಮಾಡಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ಪೈಪ್‌ಲೈನ್ ಸರಿಪಡಿಸಬೇಕೆಂದು ಸ್ಥಳಿಯ ನಿವಾಸಿಗಳಾದ ಶ್ರೀ.ಗೋಪಾಲಯ್ಯ ರವರು ಸಭೆಯಲ್ಲಿ ಮನವಿ ಸಲ್ಲಿಸಿದರು. | ಇದಕ್ಕೆ ಸಂಬಂದಿಸಿದಂತೆ ಸಭೆಯಲ್ಲಿ ಹಾಜರಿದ್ದ ಶ್ರೀ.ವಿನಯಕುಮಾರ್ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳು ಮಾತನಾಡಿ ಸ್ಥಳ ಪರಿಶೀಲನೆ ಮಾಡಿ ಸರಿಪಡಿಸುವುದಾಗಿ ಸಭೆಯಲ್ಲಿ ತಿಳಿಸಿದರು. | ಶ್ರೀ.ವಿನಯ ಕುಮಾರ್ ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 03 | ಕೆಂಪೇಗೌಡ ವಾರ್ಡ್ ನಂ-01ರ ವ್ಯಾಪ್ತಿಯಲ್ಲಿ ಸ್ಥಗೀತಗೊಂಡಿರುವ | ಇದಕ್ಕೆ ಸಂಬಂದಿಸಿದಂತೆ ಬಿ.ಡಬ್ಲ್ಯೂ.ಎಸ್.ಎಸ್.ಬಿ | ಬಿ.ಡಬ್ಲ್ಯೂ.ಎಸ್.ಎಸ್.ಬಿ. ಸಹಾಯಕ |

| | | | |
|---|---|---|---|
| | ಬೋರ್‌ವೆಲ್‌ಗಳಿಂದ ತೆಗೆದಿರುವ ಪಂಪು ಮೋಟಾರ್‌ಗಳ ವಿವರಣೆ ಕೋರಿದರು. | ಅಧಿಕಾರಿಗಳು ಮಾತನಾಡಿ ಸ್ಲಿಲ್ಟ್ ತುಂಬಿರುವ ಬೋರ್‌ವೆಲ್‌ಗಳಿಂದ ಹಾಗೂ ಸ್ಥಗೀತಗೊಂಡಿರುವ ಬೋರ್‌ವೆಲ್‌ಗಳಿಂದ ಚಾಲ್ತಿಯಲ್ಲಿರುವ ಪಂಪ್ ಮೋಟಾರ್‌ಗಳನ್ನು ಹೊರತೆಗೆದು ಸ್ಟಾಕ್ ಕಾರ್ಯವಿಧಾನದಂತೆ ಶೇಖರಣೆ ಮಾಡಲಾಗಿದ್ದು, ಇದರಲ್ಲಿ ಕೆಲವೊಂದು ಸ್ಕ್ರ್ಯಾಪ್‌ಗೆ ಹಾಕಲಾಗಿರುತ್ತದೆ. ಎಂಬುದಾಗಿ ಸಭೆಗೆ ವಿವರಣೆ ನೀಡಿದರು | ಅಭಿಯಂತರರು |
| 04 | ಕೆಂಪೇಗೌಡ ವಾರ್ಡ್ ನಂ-01ರ ವ್ಯಾಪ್ತಿಯಲ್ಲಿರುವ ಡೌನ್ ಬಜಾರ್ ರಸ್ತೆಯಲ್ಲಿರುವ ಕಲ್ಯಾಣಿಯನ್ನು (ಬಾರ್ ಪಕ್ಕದಲ್ಲಿ) ಖಾಸಗಿಯವರು ಒತ್ತುವರಿ ಮಾಡಿಕೊಂಡು ಮುಚ್ಚಿರುತ್ತಾರೆ. ಇದರಿಂದ ಹಾಲಿ ಅತಿ ಹೆಚ್ಚಾಗಿ ಬಿದ್ದ ಮಳೆಯಿಂದಾಗಿ ಮಳೆ ನೀರು ಅಕ್ಕಪಕ್ಕದ ಮನೆಗಳಿಗೆ ನುಗ್ಗುತ್ತಿರುವುದಾಗಿ ತಿಳಿಸಿ ಕೂಡಲೇ ಒತ್ತುವರಿ ಮಾಡಿಕೊಂಡಿರುವ ಕಲ್ಯಾಣಿಯನ್ನು ತೆರವುಗೊಳಿಸಬೇಕೆಂದು ಡೌನ್ ಬಜಾರ್ ರಸ್ತೆಯ ನಿವಾಸಿಗಳು ಸಭೆಯಲ್ಲಿ ಕೋರಿದರು. | ಇದಕ್ಕೆ ಸಂಬಂದಿಸಿದಂತೆ ನೊಡೆಲ್ ಅಧಿಕಾರಿಗಳು ಮಾತನಾಡಿ ಸ್ಥಳ ಪರಿಶೀಲನೆ ಮಾಡಿ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಸಭೆಗೆ ಉತ್ತರಿಸಿದರು. | ಸಹಾಯಕ ಅಭಿಯಂತರರು ವಾರ್ಡ್ –1 |
| 05 | ಕೆಂಪೇಗೌಡ ವಾರ್ಡ್ ನಂ-01ರ ವ್ಯಾಪ್ತಿಯಲ್ಲಿರುವ ಡೌನ್ ಬಜಾರ್ ರಸ್ತೆ ಕೋಗಿಲು ಸರ್ಕಲ್ ನೀಲಕಂಠ ಮನೆ ಹತ್ತಿರ ರಾಜಕಾಲುವೆ ಒತ್ತುವರಿಯಾಗಿದ್ದು, ಮಳೆ ನೀರು ಮನೆಗಳಿಗೆ ನುಗ್ಗುತ್ತಿರುವುದಾಗಿ ಕೂಡಲೇ ಒತ್ತುವರಿಯಾಗಿರುವ ರಾಜಕಾಲುವೆಯನ್ನು ತೆರವುಗೊಳಿಸಬೇಕೆಂದು ಹಾಗೂ ನೀರುಗಾಲುವೆ ನಿರ್ಮಿಸಿಕೊಡಬೇಕೆಂದು ಸಭೆಯಲ್ಲಿ ಸ್ಥಳೀಯ ನಿವಾಸಿಗಳು ಕೋರಿದರು. | ಇದಕ್ಕೆ ಸಂಬಂದಿಸಿದಂತೆ ನೊಡೆಲ್ ಅಧಿಕಾರಿಗಳು ಮಾತನಾಡಿ ಬೃಹತ್ ನೀರುಗಾಲುವೆ ಅಧಿಕಾರಿಗಳಿಗೆ ಸ್ಥಳ ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳುವಂತೆ ತಿಳಿಸಲಾಗುವುದೆಂದು ಸಭೆಗೆ ಉತ್ತರಿಸಿದರು. | ಬೃಹತ್ ನೀರುಗಾಲುವೆ ಅಧಿಕಾರಿಗಳು |
| 06 | ಕೆಂಪೇಗೌಡ ವಾರ್ಡ್ ನಂ-01ರ ಹೊಸಬೀದಿ 2ನೇ ಅಡ್ಡರಸ್ತೆ ಅಪ್ಪಣ್ಣ ಬೀದಿ ರಸ್ತೆಯಲ್ಲಿ ಅಡ್ಡಲಾಗಿರುವ ವಿದ್ಯುತ್ ಕಂಭವನ್ನು ತೆರವುಗೊಳಿಸಬೇಕೆಂದು ಶ್ರೀ.ವೈ.ಆರ್.ಶಿವಕುಮಾರ್ ರವರು ಕೋರಿದರು. | ಇದಕ್ಕೆ ಸಂಬಂದಿಸಿದಂತೆ ನೊಡೆಲ್ ಅಧಿಕಾರಿಗಳು ಮಾತನಾಧಿ ಬೇಸ್ಕಾಂ ಅಧಿಕಾರಿಗಳಿಗೆ ಸ್ಥಳ ಪರಿಶೀಲನೆ ಮಾಡಿ ರಸ್ತೆಗೆ ಅಡ್ಡಲಾಗಿರುವ ವಿದ್ಯುತ್ ಕಂಭವನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳುವಂತೆ ತಿಳಿಸಲಾಗುವುದೆಂದು ಸಭೆಯಲ್ಲಿ ತಿಳಿಸಿದರು | ಸಹಾಯಕ ಅಭಿಯಂತರರು ಬೇಸ್ಕಾಂ |

ಅಭಿಯಂತರರು

| | | | |
|---|---|---|---|
| 07 | ಕೆಂಪೇಗೌಡ ವಾರ್ಡ್ ನಂ-01ರ ವ್ಯಾಪ್ತಿಯಲ್ಲಿರುವ ಗಂಗಮ್ಮ ದೇವಸ್ಥಾನದ ಮುಂದೆ ಮಳೆ ನೀರು ಹರಿದು ಚಿರಂಜಿವಿ ಕ್ಲೀನಿಕ್ ಹತ್ತಿರ ನಿಲ್ಲುತಿರುವುದಾಗಿ ಇದನ್ನು ಸರಿಪಡಿಸಬೇಕೆಂದು ಸ್ಥಳೀಯ ನಿವಾಸಿಗಳಾದ ಶ್ರೀ. ಹೇಮರಾಜ್ ರವರು ಸಭೆಯಲ್ಲಿ ಕೋರಿದರು | ಇದಕ್ಕೆ ಸಂಬಂದಿಸಿದಂತೆ ನೋಡೆಲ್ ಅದಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ಚರಂಡಿಯಲ್ಲಿ ತುಂಬಿರುವ ಹೂಳನ್ನು ತೆಗೆದು ಶೋಲ್ಡರ್ ಡ್ರೈನ್ ಕ್ಲೆನಿಂಗ್ ಮಾಡುವಂತೆ ಸಂಬಂದಿಸಿದ ಸಹಾಯಕ ಅಭಿಯಂತರರಿಗೆ ತಿಳಿಸಿದರು | ಸಹಾಯಕ ಅಭಿಯಂತರರು ವಾರ್ಡ್ ನಂ-01 |
| 08 | ಮಾರುತಿನಗರ ಪಾಪಣ್ಣ ಬಡಾವಣೆಯಲ್ಲಿ ಸ್ಟೀಟ್ ಲೈಟ್ ಉರಿಯುತ್ತಿಲ್ಲವೆಂದು ಸ್ಥಳೀಯ ನಿವಾಸಿಗಳಾದ ಶ್ರೀ.ಚಿದಾನಂದ ರವರು ಸಭೆಯಲ್ಲಿ ಕೋರಿದರು. | ಇದಕ್ಕೆ ಸಂಬಂದಿಸಿದಂತೆ ಸ್ಥಳ ಪರಿಶೀಲನೆ ನಡೆಸಿ ಬೀದಿ ದೀಪ ನಿರ್ವಹಣೆ ಕೆಲಸವನ್ನು ಸಮರ್ಪಕವಾಗಿ ನಿರ್ವಹಿಸುವಂತೆ ಹಾಗೂ ಸ್ಟ್ರೀಟ್ ಲೈಟ್ ರಿಪೇರಿ ಮಾಡುವಂತೆ ವಿದ್ಯುತ್ ಇಲಾಖಾ ಬಿ.ಬಿ.ಎಂ.ಪಿ ಅಧಿಕಾರಿಗಳಿಗೆ ತಿಳಿಸಿದರು. | ಸಹಾಯಕ ಅಭಿಯಂತರರು ಬೀದಿ ದೀಪ ನಿರ್ವಹಣೆ |

ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಚರ್ಚಿಸಲಾಯಿತು, ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ವಂದನೆಗಳನ್ನು ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಶ್ರೀ.ಕೆ.ಬಿ.ದೇವರಾಜಯ್ಯ
ಸಹಾಯಕ ಅಭಿಯಂತರರು

ಶ್ರೀ.ರಾಮಸಂಜೀವಯ್ಯ
ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ
ನೋಡೆಲ್ ಅಧಿಕಾರಿಗಳು ವಾರ್ಡ್ ನಂ-01

ಪ್ರತಿಯನ್ನು:

1. ಮಾನ್ಯ ಜಂಟಿ ಆಯುಕ್ತರು ಯಲಹಂಕ ವಲಯರವರ ಆಪ್ತ ಶಾಖೆಗೆ ಕಳುಹಿಸಿದೆ.
2. ಮಾನ್ಯ ಮುಖ್ಯ ಅಭಿಯಂತರರು ಯಲಹಂಕ ವಲಯರವರ ಆಪ್ತ ಶಾಖೆಗೆ ಕಳುಹಿಸಿದೆ.
3. ಆರೋಗ್ಯ ವೈದ್ಯಾಧಿಕಾರಿಗಳು ಯಲಹಂಕ ವಲಯರವರಿಗೆ ಕಳುಹಿಸಿದೆ.
4. ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ ಯಲಹಂಕ ವಿಭಾಗ/ವಿದ್ಯುತ್/ರಸ್ತೆ ಮತ್ತು ಮೂಲಭೂತ ಸೌಕಾರ್ಯ/ಯೋಜನೆ/ಕೆರೆಗಳು/ ಯಲಹಂಕ ವಲಯ ಸೂಕ್ತ ಕ್ರಮಕ್ಕಾಗಿ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ/ ವಿದ್ಯುತ್/ ಬೇಸ್ಕಾಂ/ ಬಿಡಬ್ಲ್ಯೂ.ಎಸ್.ಎಸ್.ಬಿ/ಬೊರೆವೆಲ್ ಡಿವಿಷನ್/ ಯೋಜನೆ/ಯಲಹಂಕ ವಲಯರವರ ಸೂಕ್ತ ಕ್ರಮಕ್ಕಾಗಿ.
6. ಸಹಾಯಕ ಕಂದಾಯ ಅಧಿಕಾರಿಗಳು ಯಲಹಂಕ ಉಪ ವಿಭಾಗ/ಜಾಹಿರಾತು ಬಿ.ಬಿ.ಎಂ.ಪಿ ರವರ ಸೂಕ್ತ ಕ್ರಮಕ್ಕಾಗಿ.
7. ಆರಕ್ಷಕ ನೀರಿಕ್ಷಕರು ಯಲಹಂಕ ಪೊಲೀಸ್ ಠಾಣೆ ಸಂಚಾರಿ/ ಕಾನೂನು ಸುವ್ಯವಸ್ಥೆ/ ಯಲಹಂಕ ಬೆಂಗಳೂರು ರವರ ಸೂಕ್ತ ಕ್ರಮಕ್ಕಾಗಿ.
8. ಜಾನುವಾರಿ ಅಧಿಕಾರಿಗಳು ಪಶುಪಾಲನೆ ವಿಭಾಗ ಯಲಹಂಕ ವಲಯ ರವರ ಸೂಕ್ತ ಕ್ರಮಕ್ಕಾಗಿ.
9. ಅಧೀಕ್ಷಕರು ತೋಟಗಾರಿಕೆ ಇಲಾಖೆ ಬಿ.ಬಿ.ಎಂ.ಪಿ ಯಲಹಂಕ ವಲಯರವರ ಸೂಕ್ತ ಕ್ರಮಕ್ಕಾಗಿ.
10. ಡಿಪೋ ಮ್ಯಾನೇಜರ್ ಡಿಪೊ-13 ಪುಟ್ಟೇನಹಳ್ಳಿ ಡಿಪೋ ಯಲಹಂಕ ಬೆಂಗಳೂರು ಸೂಕ್ತ ಕ್ರಮಕ್ಕಾಗಿ.
11. ಕಛೇರಿ ಕಡತಕ್ಕೆ.